



ಮಗ್ಗಗಳು ಅಥವಾ ಯಾವುದೇ ಒಂದು ಕಿರು ಉದ್ದಿಮೆ ಮಾಡುವುದಿದ್ದರೂ ಅವರಿಗೆ ಸಾಧ್ಯವಾಗುವುದಿಲ್ಲ. ಜೊತೆಗೆ ಚಿಮಣಿ ದೀಪಗಳಿಂದ, ಸೌದೆ ಒಲೆಗಳಿಂದಲೇ ಬೆಂಕಿ ಅನಾಹುತವಾಗಿ ಬದುಕು ದುರಂತವಾದ ದಾರುಣ ಕತೆಗಳೂ ಬೇಕಾದಷ್ಟಿವೆ.

ನಿಜ, ಇಂದು ಮೂಲಸೌಕರ್ಯಗಳ ಕೊರತೆಯಿಂದಾಗಿ ವಿಶ್ವಾದ್ಯಂತ ಕೋಟಿಗಟ್ಟಲೆ ಜನ ಬಳಲುತ್ತಿದ್ದಾರೆ. ಅಂಕಿ ಅಂಶಗಳ ಪ್ರಕಾರ ಭಾರತದಲ್ಲಿ ಇಂದಿಗೂ 24 ಕೋಟಿಗೂ ಅಧಿಕ ಜನರು ಕತ್ತಲಲ್ಲಿದ್ದಾರೆ. ವಿದ್ಯುತ್ ಇಲ್ಲದ ಗ್ರಾಮೀಣ ಪ್ರದೇಶದ ಮನೆಗಳು 5 ಕೋಟಿಗೂ ಮಿಗಿಲಾಗಿವೆ. ಅದೇ ಸೌದೆ ಒಲೆಯಿಂದ ಹೊಗೆ ನುಂಗುತ್ತ ಅಡುಗೆ ಮಾಡುವ ಪರಿಸ್ಥಿತಿ. ಚಿಮಿಣಿ ದೀಪದ ಬೆಳಕಲ್ಲೇ ದಿನ ನೂಕುವ ಪರಿಸ್ಥಿತಿ. ನಾಗರಿಕತೆ, ಆಧುನಿಕತೆ ಎಷ್ಟು ಮುಂದುವರಿದಿದೆ ಎಂದರೂ ಅನೇಕರನ್ನು ಇಂದಿಗೂ ತಲುಪಿಲ್ಲದಿರುವುದು ನಾಗರಿಕ ಸಮಾಜದ ವ್ಯಂಗ್ಯ.

ಈ ಸೌರ ಶಕ್ತಿಯ ಒಂದು ದೀಪದಿಂದ ಲಕ್ಷಾಂತರ ಜನರಿಗೆ ಬದುಕಿನ ಆದಾಯವೂ ಆಗಿದೆ ಎನ್ನುವುದು ಕುತೂಹಲಕರ ಸಂಗತಿ. ಅದು ಉತ್ತರಕನ್ನಡ ಜಿಲ್ಲೆಯ ಯಲ್ಲಾಪುರ ತಾಲೂಕಿನ ಸಿದ್ಧಿಗಳು, ನಂದಘಡದ ಗೌಳಿಗರು, ಮೈಸೂರು, ಬೆಂಗಳೂರಿನ ಕೊಳಗೇರಿ ನಿವಾಸಿಗಳು, ಉಡುಪಿಯ ಎಲೆತಟ್ಟೆ ತಯಾರಕರು, ಬಿಹಾರದ ಕೈಮಗ್ಗ ನೇಕಾರರು, ಬೆಂಗಳೂರಿನ ಡೋಲಕ್‌ವಾಲೆ, ತುಮಕೂರಿನ ಹಾವಾಡಿಗ ಸಮುದಾಯದವರು, ಮಲೆಮಹದೇಶ್ವರ ಬೆಟ್ಟದ ಸುತ್ತಮುತ್ತಲಿನ ಹತ್ತಾರು ಹಳ್ಳಿಗಳು... ಹೀಗೆ ಬೆಳಕು ಕಾಣದ ಅನೇಕ ಸಮುದಾಯಗಳಿಂದು ಬೆಳಕು ಕಾಣಲು ಸಾಧ್ಯವಾಗಿದೆ. ಹಾಗೆ ಬದುಕು ಸುಧಾರಿಸಿಕೊಳ್ಳಲೂ ಸಾಧ್ಯವಾಗಿದ್ದಕ್ಕೆ ಕಾರಣ ಸೌರಶಕ್ತಿ.

ಸೋಲಾರ್ ವಿದ್ಯುತ್ತಿನ ವಿಶೇಷತೆಯೆಂದರೆ ಇದು ಅಪಾಯವಿಲ್ಲದ ವಿದ್ಯುತ್. ಇವತ್ತು ನಗರ ಪ್ರದೇಶದಲ್ಲಿ ಬಡತನ ರೇಖೆಗಿಂತ ಕೆಳಗಿರುವ ಬಹಳಷ್ಟು ಮನೆಗಳಲ್ಲಿ ಕರೆಂಟಿಲ್ಲ. ಅವರು ಬೆಳಕಿನ ಸಲುವಾಗಿ ಸೀಮೆ ಎಣ್ಣೆ ಹಾಗೂ ಮೇಣದ ಬತ್ತಿಯನ್ನು ಉಪಯೋಗಿಸುತ್ತಾರೆ. ಆರ್ಥಿಕವಾಗಿ ಇದು ಹೊರೆಯೂ ಹೌದು. ಸೀಮೆ ಎಣ್ಣೆ ಉಪಯೋಗಿಸುವುದರಿಂದ ಹೊಗೆ ಬರುತ್ತದೆ. ಆ ಹೊಗೆಯಿಂದ ಕಣ್ಣು ಉರಿ ಮತ್ತು ಉಸಿರಾಟದ ಸಮಸ್ಯೆಗಳಿಗೆ ಕಾರಣವಾಗುತ್ತದೆ. ಜೊತೆಗೆ ಸಣ್ಣ ಮಕ್ಕಳಿಗೆ ಓದಲು, ಬರೆಯಲು ತೊಂದರೆಯಾಗುತ್ತದೆ. ಸೀಮೆ ಎಣ್ಣೆ ಬಳಸಿ ಎರಡು ದೀಪ ಉರಿಸಲು ದಿನಂಪ್ರತಿ 10 ರಿಂದ 15 ರೂಪಾಯಿ ಖರ್ಚು ಮಾಡಬೇಕಾಗುತ್ತದೆ. ಆದರೆ ಸೋಲಾರಿನ ಎರಡು ಲೈಟ್ ಅಳವಡಿಸಿದರೆ ದಿನನಿತ್ಯ 5 ರಿಂದ 10 ರೂಪಾಯಿ ಖರ್ಚಿನಲ್ಲಿ ಸ್ವಚ್ಛ ಬೆಳಕಿನಲ್ಲಿ ಅಡುಗೆ ಮಾಡಬಹುದು. ಆರೋಗ್ಯವೂ ಸುಧಾರಿಸುತ್ತದೆ. ಜೊತೆಗೆ ಮಕ್ಕಳು ಕೂಡ ಚೆನ್ನಾಗಿ ಓದಲು ಸಾಧ್ಯ. ಈ ಹಿನ್ನೆಲೆಯಲ್ಲಿ ರಾಜ್ಯದ ವಿವಿಧ ಕುಗ್ರಾಮಗಳಲ್ಲಿ ಇಡೀ ಊರನ್ನೇ ಸೌರಶಕ್ತಿಯಿಂದ ಬೆಳಗಿಸುವ ಪ್ರಯತ್ನಗಳೂ ಯಶಸ್ವಿಯಾಗಿವೆ. ಸೌರಶಕ್ತಿಯಿಂದ ಒಂದು ಮನೆ ಬೆಳಗುವುದು ವಿಶೇಷವಲ್ಲ; ಇಡೀ ಗ್ರಾಮಗಳು ಬೆಳಗತೊಡಗಿರುವುದು ವಿಶೇಷ. ಹೌದು, ಬದುಕು ಬದಲಿಸುತ್ತಿದೆ ಸೂರ್ಯನ ಶಕ್ತಿ. ■

42ನೇ ಪುಟವನ್ನೂ ನೋಡಿ